# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 149 (280) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಡಿ.ಎಸ್. ಅರುಣ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 09.12.2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಇತ್ತೀಚಿನ ಎರಡು ವರ್ಷಗಳಲ್ಲಿ ಕರ್ನಾಟಕವನ್ನು ಬಿಟ್ಟು ತೆಲಂಗಾಣ ರಾಜ್ಯಕ್ಕೆ ಹೂಡಿಕೆ ಸ್ಥಳಾಂತರಗೊಳಿಸಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; ಸ್ಥಳಾಂತರಕ್ಕೆ ಕಾರಣಗಳ ಬಗ್ಗೆ ಸರ್ಕಾರ ಸಂಗ್ರಹಿಸಿದ ಅಧಿಕೃತ ವರದಿ ಇದೆಯೇ; (ಇದ್ದಲ್ಲಿ ವಿವರ ಒದಗಿಸುವುದು) | ಇತ್ತೀಚಿನ ಎರಡು ವರ್ಷಗಳಲ್ಲಿ ಕರ್ನಾಟಕವನ್ನು ಬಿಟ್ಟು ಇತರೆ ರಾಜ್ಯಕ್ಕೆ ಹೂಡಿಕೆ ಸ್ಥಳಾಂತರಗೊಳಿಸಿರುವ ಕೈಗಾರಿಕೆಗಳ ಅಧಿಕೃತ ವರದಿ ಇರುವುದಿಲ್ಲ. |
| ಆ | ರಾಜ್ಯದಿಂದ ಹೊರ ಹೋಗುತ್ತಿರುವ ಹೂಡಿಕೆಗಳನ್ನು ತಡೆಯಲು ಮತ್ತು ಹೊಸ ಕೈಗಾರಿಕೆಗಳನ್ನು ಆಕರ್ಷಿಸಲು ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ಜಾರಿಗೊಳಿಸಿರುವ ನೀತಿ ಸುಧಾರಣೆಗಳು ಹಾಗೂ ಕ್ರಮಗಳು ಯಾವುವು; | ರಾಜ್ಯಕ್ಕೆ ಬಂಡವಾಳ ಹೂಡಿಕೆಗಳನ್ನು ಆಕರ್ಷಿಸಲು ಕೈಗಾರಿಕಾ ನೀತಿ 2025-30 ನ್ನು ಹೊರತಂದಿದ್ದು, ಸದರಿ ನೀತಿಯಡಿ ಕೈಗಾರಿಕೆಗಳಿಗೆ ಆಕರ್ಷಕ ರಿಯಾಯಿತಿ ಹಾಗೂ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ.<br><br>ರಾಜ್ಯದಲ್ಲಿ ಕೈಗಾರಿಕೆಗಳನ್ನು ಆಕರ್ಷಿಸಲು ಸರ್ಕಾರವು ಕೆಳಕಂಡ ಆದ್ಯತಾ/ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>➢ ದೇಶ-ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಸರಣಿ ಸಭೆಗಳನ್ನು ನಡೆಸಲಾಗಿದೆ.<br>➢ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳೀಕರಣ ಗೊಳಿಸಲಾಗಿದೆ.<br>➢ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಕೆಲವು ಮುಖ್ಯ ಎನ್.ಒ.ಸಿ/ಒಪ್ಪಿಗೆಗಳನ್ನು ಸ್ವಯಂ ಘೋಷಣ ಪತ್ರದ ಆಧಾರದ ಮೇಲೆ ಪಡೆಯಲು 3 ವರ್ಷಗಳವರೆಗೆ ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002 ಕ್ಕೆ ತಿದ್ದುಪಡಿ ತರಲಾಗಿದೆ. |

| | | |
|---|---|---|
| ಇ | ಬೆಂಗಳೂರು, ಶಿವಮೊಗ್ಗ ಸೇರಿದಂತೆ ರಾಜ್ಯದ ವಿವಿಧ ಕೈಗಾರಿಕಾ ವಲಯಗಳಲ್ಲಿ ಹೂಡಿಕೆ ಕುಸಿತ ಕಂಡುಬಂದಿರುವುದಕ್ಕೆ ಇಲಾಖೆಯ ವಿವರಣೆ ಒದಗಿಸುವುದು; | 2023-24 ರಿಂದ ಇಲ್ಲಿಯವರೆಗೆ ರಾಜ್ಯದ ಹೂಡಿಕೆಗೆ ಏಕಗವಾಕ್ಷಿ ಅನುಮೋದನಾ ಸಮಿತಿಗಳಲ್ಲಿ ಒಟ್ಟು 1283 ಘಟಕಗಳಿಗೆ ಅನುಮೋದನೆ ನೀಡಿದ್ದು, ಇವುಗಳಿಂದ ರೂ.1,78,823 ಕೋಟಿಗಳ ಬಂಡವಾಳ ಹೂಡಿಕೆಯಾಗಿಲಿದ್ದು ಹಾಗೂ 348208 ಜನರಿಗೆ ಉದ್ಯೋಗಾವಕಾಶ ನಿರೀಕ್ಷಿಸಲಾಗಿದೆ.<br><br>ರಾಜ್ಯದ ವಿವಿಧ ಕೈಗಾರಿಕಾ ವಲಯಗಳಲ್ಲಿ ಹೂಡಿಕೆ ಕುಸಿತ ಕಂಡುಬಂದಿರುವುದಿಲ್ಲ. |
| ಈ | ಮುಂದಿನ 3 ವರ್ಷಗಳಲ್ಲಿ ಕರ್ನಾಟಕ ಕೈಗಾರಿಕಾ ಕ್ಷೇತ್ರವನ್ನು ಬಲಪಡಿಸಲು ಸರ್ಕಾರ ತಯಾರಿಸಿರುವ ದೂರದೃಷ್ಟಿ ಯೋಜನೆ ಮತ್ತು ಗುರಿಗಳ ಬಗ್ಗೆ? (ವಿವರ ನೀಡುವುದು) | ಕೈಗಾರಿಕಾ ನೀತಿ 2025-30 ರ ಉದ್ದೇಶಗಳು ಕೆಳಕಂಡಂತಿರುತ್ತವೆ:<br>➢ ರೂ.7,50,000 ಕೋಟಿಗಳ ಹೂಡಿಕೆ ಗುರಿಯೊಂದಿಗೆ ಉತ್ಪಾದನಾ ವಲಯಕ್ಕೆ 12% ವೇಗವರ್ಧಿತ ವಾರ್ಷಿಕ ಬೆಳವಣಿಗೆ ದರ ಸಾಧಿಸುವುದು.<br>➢ 2030 ರೊಳಗಾಗಿ 20,00,000 ಜನರಿಗೆ ಉದ್ಯೋಗಗಳನ್ನು ಸೃಷ್ಟಿಸುವುದು.<br>➢ ಹೂಡಿಕೆದಾರರಿಗೆ ಪರಿಸರ ಸ್ನೇಹಿ ಮತು ಸುಸ್ಥಿರ ಉಪಕ್ರಮಗಳನ್ನು ಉತ್ತೇಜಿಸುವುದರೊಂದಿಗೆ ಸುಸ್ಥಿರತೆಯ ಪ್ರವರ್ತಕರಾಗುವುದು ಪ್ರಸ್ತುತ ಇರುವ ಮತ್ತು ಹೊಸ ಹೂಡಿಕೆದಾರರಿಗೆ ಸುಸ್ಥಿರತೆ ಆಧಾರಿತ ಉತ್ತೇಜಕಗಳನ್ನು ನೀಡುವ ಮೂಲಕ ಪರಿಸರ ಸ್ನೇಹಿ ಕೈಗಾರಿಕಾ ಪ್ರದೇಶಗಳನ್ನು ಉತ್ತೇಜಿಸುವ ವೇಳೆ ಹಸಿರು ಉಪಕ್ರಮಗಳನ್ನು ಪ್ರೋತ್ಸಾಹಿಸುವುದು.<br>➢ ಕರ್ನಾಟಕ ಸಮತೋಲಿತ ಮತು ಸಮತೋಲನದ ಪ್ರಾದೇಶಿಕ ಬೆಳವಣಿಗೆ ಮಾಡುವುದು |

ಸಿಐ 354 ಎಸ್‌ಪಿಐ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು